## 22. ರಾಮನಿಗೆ ಶಂಖ; ಮಂದಿರಕ್ಕೆ ಶಂಕು

ದಶಕಗಳಿಂದ ಕಾಯುತ್ತಿರುವ ರಾಮ ಮಂದಿರ ನಿರ್ಮಾಣದ ಶಿಲಾನ್ಯಾಸಕ್ಕೆ ಕ್ಷಣಗಣನೆ ಶುರುವಾಗಿದ್ದು, ಬೆಳಿಗ್ಗೆ 12.30ಕ್ಕೆ ಕೋಟ್ಯಂತರ ಮಂದಿ ಕಾಯುತ್ತಿರುವ ಬಹುವರ್ಷದ ಆಸೆ ನೆರವೇರಲಿದೆ. ಕೊರೋನಾ ಸೋಂಕು ದಿನದಿಂದ ದಿನಕ್ಕೆ ಏರಿಕೆಯಾಗುತ್ತಿರುವುದರಿಂದ ಕೇವಲ 175 ಗಣ್ಯರನ್ನು ಮಾತ್ರ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿದೆ. ಈ ಆದ್ದೂರಿ ಕಾರ್ಯಕ್ರಮಕ್ಕಾಗಿ ಇಡೀ ಅಯೋಧ್ಯೆ ನವವಧುವಿನ ರೀತಿ ಸಜ್ಜಾಗಿದೆ. ಕೋಟ್ಯಂತರ ಮಂದಿ ಕಾತುರದಿಂದ ಕಾಯುತ್ತಿರುವ ಕಾರ್ಯಕ್ರಮದ ಸಂಪೂರ್ಣ ಮಾಹಿತಿ ಇಲ್ಲಿದೆ.

**ಅಭಿಜಿತ್ ಲಗ್ನದಲ್ಲಿ ಭೂಮಿ ಪೂಜೆ:** ಆಗಸ್ಟ್–5ರ ಮಧ್ಯಾಹ್ನ 12.15ಕ್ಕೆ ಅಭಿಜಿತ್ ಮುಹೂರ್ತದಲ್ಲಿ ರಾಮಮಂದಿರ ನಿರ್ಮಾಣ ಕಾರ್ಯದ ಶಿಲಾನ್ಯಾಸ ನೆರವೇರಲಿದೆ. 40 ಕೆ.ಜಿ ತೂಕದ ಬೆಳ್ಳಿ ಇಟ್ಟಿಗೆ ಸ್ಥಾಪಿಸುವ ಮೂಲಕ ಮೋದಿ ಅವರು ಮಂದಿರ ನಿರ್ಮಾಣಕ್ಕೆ ಚಾಲನೆ ನೀಡಲಿದ್ದಾರೆ.

**ಪ್ರಮುಖಾಂಶ:–**

- ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ಹಂಚಲು ಶುರುಮಾಡಿದ್ದು, ಮೊದಲ ಆಹ್ವಾನವನ್ನು ಬಾಬರಿ ಮಸೀದಿ ಭೂ ವಿವಾದದಲ್ಲಿ ಪ್ರತಿವಾದಿಯಾಗಿದ್ದ ಇಕ್ಬಾಲ್ ಅನ್ಸಾರಿ ಅವರಿಗೆ ನೀಡಲಾಗಿದೆ.
- ಭೂಮಿ ಪೂಜೆ ಮತ್ತು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸ್ವಾಗತಕ್ಕೆ 5,100 ಕಳಸಗಳನ್ನು ಸಿದ್ಧಪಡಿಸಲಾಗಿದೆ.
- ಪ್ರಧಾನಮಂತ್ರಿ ಮೋದಿ ಅವರು ಶ್ರೀರಾಮ ಜನ್ಮ ಭೂಮಿ ಪರಿಸರದಲ್ಲಿ ಪಾರಿಜಾತ ವೃಕ್ಷದ ಸಸಿ ನೆಡಲಿದ್ದಾರೆ.
- ಶಿಲಾನ್ಯಾಸ ಕಾರ್ಯಕ್ರಮದ ಸಂಬಂಧ ಕಾರ್ಯಕ್ರಮಗಳು ಪ್ರಾರಂಭವಾಗಿವೆ.
- 21 ವೈದಿಕ ಆಚಾರ್ಯರು ಬೆಳಿಗ್ಗೆ 9 ಗಂಟೆಗೆ ಮಹೇಶ್ ಭರತಚಕ್ರ ಅವರಿಗೆ ಸಂಕಲ್ಪ ಮಾಡಿಸಿ ಪ್ರಾರಂಭಿಸಿದರು. ಡಾ: ರಾಮಾನಂದ್ ದಾಸ್ ಅವರು ಪೂಜೆ ನೆರವೇರಿಸಿದರು.

ರಾಮಮಂದಿರದ ಶಿಲಾನ್ಯಾಸ, ಮೂವತ್ತು ವರ್ಷಗಳ ಹಿಂದೆಯೇ ಅಂದರೆ, 1989ರ ನವೆಂಬರ್ 9 ರಂದೇ ದಿ. ರಾಜೀವ್ ಗಾಂಧಿ ಸರ್ಕಾರದ ಅನುಮತಿಯ ಮೇರೆಗೆ ಜರುಗಿತ್ತು. ಬಿಹಾರದ ದಲಿತ ಯುವಕ ಕಾಮೇಶ್ವರ್ ಚೌಪಾಲ್ ಮೊದಲ ಇಟ್ಟಿಗೆಯನ್ನು ಇಟ್ಟಿದ್ದರು. ರಾಮಮಂದಿರದ ಶಿಲಾನ್ಯಾಸಕ್ಕಾಗಿ ವಿಶ್ವ ಹಿಂದೂ ಪರಿಷತ್ ದೇಶಾದ್ಯಂತ ಅಭಿಯಾನ ನಡೆಸಿತ್ತು. ಶಿಲಾನ್ಯಾಸ ಕುರಿತ ಚರ್ಚೆಗಾಗಿ 1984ರ ಏಪ್ರಿಲ್ 8 ರಂದು ದೆಹಲಿಯ ವಿಜ್ಞಾನ ಭವನದಲ್ಲಿ ಧರ್ಮಸಂಸದ್ ಆಯೋಜಿಸಲಾಗಿತ್ತು. 1986ರಲ್ಲಿ ರಾಮಮಂದಿರದ ಬೀಗವನ್ನು ತೆರೆಯಲಾಗಿತ್ತು. ವಿಶ್ವ ಹಿಂದೂ ಪರಿಷತ್ತು ನಾಯಕ ಹಾಗೂ ನಿವೃತ್ತಿ ನ್ಯಾಯಾಧೀಶ ದೇವಕಿ ನಂದನ ಅಗರವಾಲ್ ಅವರು ಫೈಜಾಬಾದ್‌ನ ನ್ಯಾಯಾಲಯದಲ್ಲಿ 1989ರ ಜುಲೈ–1ರಂದು ರಾಮನ ಮಿತ್ರನ ರೂಪದಲ್ಲಿ ದಾವೆ ಹೂಡಿದರು. ರಾಮ ಹಾಗೂ ಜನ್ಮಸ್ಥಳ ಪೂಜ್ಯನೀಯ ಎಂದು ಅವರು ತಿಳಿಸಿದ್ದರು.

**ವೇದಿಕೆ ಮೇಲಿರಲಿರುವ ಐವರು ಪ್ರಮುಖರು:–**

- ನರೇಂದ್ರ ಮೋದಿ, ಪ್ರಧಾನ ಮಂತ್ರಿ
- ಮಹಂತ ನೃತ್ಯ ಗೋಪಾಲ್ ದಾಸ್, ಶ್ರೀ ರಾಮಜನ್ಮಭೂಮಿ ಟ್ರಸ್ಟ್ ಅಧ್ಯಕ್ಷ
- ಮೋಹನ್ ಭಾಗವತ್, ಆರ್ ಎಸ್ ಎಸ್ ಮುಖ್ಯಸ್ಥ
- ಆನಂದಿ ಬೆನ್ ಪಟೇಲ್, ಉತ್ತರ ಪ್ರದೇಶ ರಾಜ್ಯಪಾಲೆ
- ಯೋಗಿ ಆದಿತ್ಯನಾಥ್, ಉತ್ತರ ಪ್ರದೇಶ ಮುಖ್ಯಮಂತ್ರಿ.

**ಆನ್‌ಲೈನ್‌ನಲ್ಲಿ ಶಾ ವೀಕ್ಷಣೆ:** ಕೊರೋನಾ ಸೋಂಕು ದೃಢಪಟ್ಟು ಆಸ್ಪತ್ರೆಗೆ ದಾಖಲಾಗಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇಡೀ ಕಾರ್ಯಕ್ರಮವನ್ನು ಅನ್‌ಲೈನ್ ಮೂಲಕ ವೀಕ್ಷಿಸಲಿದ್ದಾರೆ. ಇನ್ನು ಉತ್ತರ ಪ್ರದೇಶ

ಉಪ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಆಸ್ಪತ್ರೆಯಲ್ಲಿಯೇ ದೀಪ ಬೆಳಗಿಸುವ ಮೂಲಕ ಭೂಮಿಪೂಜೆಯನ್ನು ಸಂಭ್ರಮಿಸಲಿದ್ದಾರೆ.

ಆಧಾರ:ವಿಶ್ವವಾಣಿ, ದಿನಾಂಕ:05.08.2020